

**ಎಡದಿಂದ ಬಲಕ್ಕೆ**

1. ಆರಿಸಿ ಬಂದವನ ಮುಖಕ್ಕೆ ಹಚ್ಚಿದ್ದು ಅದಾವ ಮಂಗಳ ದ್ರವ್ಯ? 4
3. ಕಡೆಗೂ ಆತ ತಾನು ಬಯಸಿದ್ದ ಕುಸ್ತಿ ಕಣವನ್ನು ತಲುಪಿದ 3
4. ಕಂಬಿ ಎಣಿಸುತ್ತಿರುವವರಿಗೆ ಒಂದು ಎಚ್ಚರಿಕೆಯ ಆಜ್ಞೆ 3
6. ಅಲ್ಲಿಂದ ತರಗು ಹೊತ್ತುವ ಹೊಣೆಗಾರಿಕೆ ಬಹಳ ದೊಡ್ಡದು 4
7. ವಾರವಾರವೂ ವ್ಯಾಪಾರದ ನಂತರ ಆತ ನೋಡುವುದು ಇದೇ ಕಡಲು 4
8. ದುಡ್ಡಿನ ಬಗೆಗೇ ಸದಾ ಚಿಂತಿಸುತ್ತಾನೆ ಹಣದ ಗುಲಾಮ 4
10. ಕಾಣೆಯಾದವನನ್ನು ಗುರುತಿಸಿ ಕರೆದು ತಂದವ ಆತನದೇ ಮಿತ್ರ 4
12. ಮಾರು ದೂರ ಹೋಗಿ ತರುವಷ್ಟರಲ್ಲಿ ಎಲ್ಲವೂ ಚೆಲ್ಲಾಪಿಲ್ಲಿ 4
14. ಎಲ್ಲವನ್ನೂ ಭಂಗ ಮಾಡುವವನಿಂದ ಕಾಪಾಡಬೇಕು ದೇವರು 4
16. ಗೂಂಡಾಗಳಂತೆ ಮೇಲೆರಗುವ ಮಂಗ ಮುಂದಾಳು 3
17. ಮಲ್ಲಿಗೆಯನ್ನು ಮಾರುವಾಗ ಏಕೆ ಬೇಕು ಈ ಮುಂಡಾಸು? 3
18. ರಾಜ ರಾಣಿಯರನ್ನು ಕಂಡೊಡನೆ ಒಪ್ಪಿಸಿದ್ದು ಗೌರವದ ಕಾಣಿಕೆ 4

**ಮೇಲಿನಿಂದ ಕೆಳಕ್ಕೆ**

1. ಅಂಗಡಿಯನ್ನು ಮುಚ್ಚಿ ಎಲ್ಲಾದರೂ ಬಚ್ಚಿಟ್ಟುಕೋ 3
2. ನೂರಕ್ಕೆ ನೂರರಷ್ಟು ಜನರಿಗೆ ಇದ್ದೇ ಇದೆ ಉಗುರು 3
3. ಹೂವನ್ನು ಮಾರಲು ಸ್ಥಳ ನೀಡಬೇಕೆಂದು ಮನವಿ 4
5. ರಂಜನೀಯವಾಗಿದ್ದ ಪ್ರದೇಶದಲ್ಲೆಲ್ಲ ಹಬ್ಬಿದೆ ರೋಗದ ಜೊತೆಗಾರ 3
7. ಪೆಟ್ಟಿಗೆಗಳನ್ನು ಜೋಡಿಸಿರುವಲ್ಲಿಗೆ ಹೋಗಲು ಈ ಮೆಟ್ಟಿಲ ಸರಣಿ 4
9. ಹರಸಾಹಸ ಮಾಡಿ ವಾಪಸ್ ಬಂದವರ ಸಂಖ್ಯೆ ಸಾವಿರಾರು 4
11. ಕಳ್ಳರಿಗೆ ನಡುಕ ಹುಟ್ಟಿಸಿತು ನೋಡಿ ಮಹಾನ್ ಕಪ್ಪು ಸರ್ಪ 3
13. ಬಾಲಕರನ್ನು ಹೆದರಿಸಲು ಇದೆಂಥ ಭಾರೀ ಚಾವಟಿ? 4
14. ವೈಭವವನ್ನು ಪ್ರದರ್ಶಿಸಲೆಂದೇ ನಿರ್ಮಿಸಿದ್ದು ಈ ಮನೆ 3
15. ತೋರಣ ಕಟ್ಟಲು ಮುಂದೆ ಬಂದವಳು ಒಬ್ಬಳು ಯುವತಿ 3

---

## 14—03—2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಸ್ವಾಭಾವಿಕ 3. ಆಸಾಮಿ 4. ಥಳಕು 6. ನಿವೇಶನ 7. ಆದರ 9. ಆಕರ 11. ಯತನ (=ಯತ್ನ) 13. ತಿಲಕ 15. ಕಂದಾಚಾರ 17. ಕುರೂಪ 18. ಮದ್ದಾನೆ 19. ನಜರಾಣಿ

**ಮೇಲಿನಿಂದ ಕೆಳಕ್ಕೆ**

1. ಸ್ವಾಮಿನಿ 2. ಕಥನ 3. ಆನಂದ 5. ಕುಹಕ 7. ಆಲಯ 8. ರಸನ 9. ಆಣತಿ 10. ರಜಕ 12. ತದುಕು 14. ಲಲನೆ 15. ಕಂಪನ 16. ರಮಣಿ

ಪ್ರಶ್ನಾಂಕಣ

# ಸೆರೆಂಗೆಟಿ: ಏನು ಅದ್ಭುತ?

ಸೆರೆಂಗೆಟಿ ಇದು ಆಫ್ರಿಕಾ ಖಂಡದ ಒಂದು ಪರಿಸರ ವ್ಯವಸ್ಥೆಯ (ಎಕೋ ಸಿಸ್ಟಂ) ಪ್ರದೇಶ. 30,000 ಚದರ ಕಿಲೋಮೀಟರ್ ವೈಶಾಲ್ಯದ ಈ ಪ್ರದೇಶ ತಾಂಜನೀಯಾ ದೇಶದಲ್ಲಿ ಬಹುಭಾಗ ಮತ್ತು ನೆರೆಯ ಕೀನ್ಯಾ ದೇಶದಲ್ಲಿ ಸ್ವಲ್ಪ ಭಾಗ ಹರಡಿದೆ. ಈ ಪ್ರದೇಶದಲ್ಲೇ ಸಮೃದ್ಧ ಹುಲ್ಲು ಮೇವಿನ ಸವಾನಾ ಹುಲ್ಲು ಬಯಲು ಹರಡಿದೆ. ಗ್ರೂಮೆಡಿ ಮತ್ತು ಮಾರಾ ನದಿಗಳೂ ಈ ಪ್ರದೇಶದಲ್ಲೇ ಪ್ರವಹಿಸುತ್ತವೆ. ಪ್ರಸಿದ್ಧ ಸೆರೆಂಗೆಟಿ ರಾಷ್ಟ್ರೀಯ ಉದ್ಯಾನ, ಮಸಾಯ್ ಮಾರಾ ರಾಷ್ಟ್ರೀಯ ಉದ್ಯಾನ, ಮತ್ತು ಎನ್ಗೋರೋಂಗೋ ಸಂರಕ್ಷಿತ ಪ್ರದೇಶವೂ ಸೇರಿದಂತೆ ಹಲವಾರು ರಾಷ್ಟ್ರೀಯ ಉದ್ಯಾನಗಳು (ಚಿತ್ರ 2, 3) ಸೆರೆಂಗೆಟಿ ಪರಿಸರ ವ್ಯವಸ್ಥೆಯಲ್ಲಿ ಸೇರಿವೆ.

ಸೆರೆಂಗೆಟಿ ಪ್ರದೇಶದ ಮೊದಲ ಅದ್ಭುತ ಏನೆಂದರೆ ಅಲ್ಲಿ ಧರೆಯ ಅತ್ಯಂತ ಬೃಹತ್ ಪ್ರಾಣಿ ಸಮೂಹ (ಹುಲ್ಲು ಮೇಯುವ ಪ್ರಾಣಿಗಳು ಮತ್ತು ಬೇಟೆಗಾರರು) ನೆಲೆಗೊಂಡಿದೆ. ತಜ್ಞರು ಎಣಿಸಿರುವ ಪ್ರಕಾರ ಅಲ್ಲಿ 20 ಲಕ್ಷ ವೈಲ್ಡ್ ಬೀಸ್ಟ್‌ಗಳು, 9 ಲಕ್ಷ ಗೆಜೆಲ್‌ಗಳು, 3 ಲಕ್ಷ ಜೀಬ್ರಾಗಳು, 70,000 ಕಾಡೆಮ್ಮೆಗಳು, 4000 ಜಿರಾಫ್‌ಗಳು, 2,700 ಆನೆಗಳು, 500 ಹಿಪ್ಪೋಗಳು, 200 ಕಪ್ಪು ಘೇಂಡಾ ಮೃಗಗಳು, ಹತ್ತು ಪ್ರಭೇದಗಳ ಪ್ರೈಮೇಟ್‌ಗಳು, ಆಸ್ಟ್ರಿಚ್‌ಗಳೂ ಸೇರಿದಂತೆ 500 ಪ್ರಭೇದಗಳ ಹಕ್ಕಿಗಳು, 4000 ಸಿಂಹಗಳು, 1000 ಚಿರತೆಗಳು, 225 ಚೀತಾಗಳು, 3500 ಕಿರುಬಗಳು, 300 ಕಾಡು ನಾಯಿಗಳು ಮತ್ತಿತರ ಹಲವಾರು ಬಗೆಯ ಪ್ರಾಣಿಗಳು ಅಸ್ತಿತ್ವದಲ್ಲಿವೆ!

ಸೆರೆಂಗೆಟಿ ಪ್ರದೇಶದ ದ್ವಿತೀಯ ಮಹಾ ಅದ್ಭುತ ಪ್ರತಿ ವರ್ಷ ಅಲ್ಲಿ ನಡೆಯುವ 'ಹುಲ್ಲು ಮೇಯುವ ಪ್ರಾಣಿ'ಗಳ ಮಹಾ ವಲಸೆ ಕಾರ್ಯಕ್ರಮ. ಪ್ರಮುಖವಾಗಿ 17 ಲಕ್ಷ ವೈಲ್ಡ್ ಬೀಸ್ಟ್‌ಗಳು, 2,60,000 ಜೀಬ್ರಾಗಳು, 4,70,000 ಗೆಜೆಲ್‌ಗಳು ಮತ್ತು ಲಕ್ಷಾಂತರ ಇತರ ಪ್ರಾಣಿಗಳು ಈ ವಿದ್ಯಮಾನದಲ್ಲಿ ಭಾಗಿಯಾಗುತ್ತವೆ!




ಪ್ರತಿವರ್ಷ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಇವೆಲ್ಲ ಪ್ರಾಣಿಗಳೂ ತಾವಿರುವ ಸೆರೆಂಗೆಟಿ ಪ್ರದೇಶದ ದಕ್ಷಿಣದಿಂದ ಉತ್ತರಕ್ಕೆ 400 ಕಿ.ಮೀ ದೂರದ ಕೀನ್ಯಾ ದೇಶದ ಮಸಾಯ್ ಮಾರಾದಲ್ಲಿ ಆ ವೇಳೆಗೆ ಸಮೃದ್ಧವಾಗಿ ಬೆಳೆದಿರುವ ಹುಲ್ಲು ಮೇವನ್ನು ಅರಸಿ ಹೊರಡುತ್ತವೆ. ಅವುಗಳ ಹಾದಿಗೆ ಅಡ್ಡನಾಗಿ ಪ್ರವಹಿಸುವ ಗ್ರೂಮೆಡಿ ನದಿಯನ್ನು ದಾಟಿ (ಚಿತ್ರ1) ಮುನ್ನಡೆಯುತ್ತವೆ. ಗ್ರೂಮೆಡಿ ನದಿಯನ್ನು ದಾಟುವಾಗ ನದಿಯಲ್ಲಿನ ಮೊಸಳೆಗಳಿಗೆ ಮತ್ತು ನದೀ ದಡಗಳಲ್ಲಿ ಕಾದು ಕುಳಿತ ಸಿಂಹಗಳಿಗೆ ಹೇರಳ ಸಂಖ್ಯೆಗಳಲ್ಲಿ ಬಲಿಯಾಗುತ್ತವೆ. ಮಸಾಯ್ ಮಾರಾವನ್ನು ತಲುಪುವ ಎಲ್ಲ ವಲಸೆಗಾರರು ಅಲ್ಲಿನ ಸಮೃದ್ಧ ಆಹಾರದ ಆಸರೆಯಲ್ಲಿ ಲಕ್ಷಾಂತರ ಮರಿಗಳನ್ನು ಪ್ರಸವಿಸುತ್ತವೆ. ಮತ್ತೆ ನವೆಂಬರ್ ತಿಂಗಳಲ್ಲಿ ಮರಿಗಳ ಜೊತೆಗೆ ಇವೆಲ್ಲ ವಲಸಿಗರು ಮರು ಪಯಣವನ್ನು ಆರಂಭಿಸುತ್ತವೆ. ತಾವು ಬಂದ ಹಾದಿಯಲ್ಲೇ ಹಾಗೆಯೇ ಭಾರೀ ಸಂಖ್ಯೆಯಲ್ಲಿ ಬೇಟೆಗಾರರಿಗೆ ಬಲಿಯಾಗುತ್ತವೆ; ಉಳಿದೆಲ್ಲ ಪ್ರಾಣಿಗಳೂ ಡಿಸೆಂಬರ್ ವೇಳೆಗೆ ತಮ್ಮ ಮೂಲ ನೆಲೆಯಾದ ಸೆರೆಂಗೆಟಿ ಪ್ರದೇಶವನ್ನು ತಲುಪುತ್ತವೆ. ಆ ವೇಳೆಗೆ ಆ ಪ್ರದೇಶದಲ್ಲಿ ಸಮೃದ್ಧವಾಗಿ ಹುಲ್ಲು ಮೇವು ಬೆಳೆದಿರುತ್ತದೆ.

■ ಎನ್. ವಾಸುದೇವ್